ಗೌರಮ್ಮನನ್ನು ಬಡಿದೆಬ್ಬಿಸಿದಂತಾಯಿತು... ಆಘಾತವಾಯಿತು. ಅಚ್ಚರಿಯ ಮೇಲೆ ಅಚ್ಚರಿಯಾಯಿತು. ಗೌರಮ್ಮನ ಮನಸ್ಸಿನೊಳಗೆ ನೆನಪುಗಳು ಗುಂಯಿಗುಟ್ಟತೊಡಗಿದವು.

...ಲೆಕ್ಕ ಮಾಡಿ ಮೂವತ್ತು ವರ್ಷಗಳಿಂದ ಒಂದೇ ಮನೆಯಲ್ಲಿದ್ದರೂ ಪರಸ್ಪರ ಮಾತು ಬಿಟ್ಟ ದಂಪತಿಗಳು ನಾವು. ಹೊಸಕಾಲದವರಾಗಿದ್ದರೆ ಎಂದೋ ವಿಚ್ಛೇದನವಾಗುತ್ತಿತ್ತು. ಪ್ರತಿಷ್ಠೆಗಾಗಿ ವಿಚ್ಛೇದನವಾಗದಿದ್ದರೂ ನಮ್ಮ ನಡುವೆ ಹಗಲೂ ರಾತ್ರಿ ಮಹಾ ಮೌನ. ರಾಜಿ ಮಾಡುವವರು ಯಾರು? ಒಬ್ಬನೇ ಮಗ ದೂರದ ದೇಶದಲ್ಲಿ — ಎಲ್ಲವನ್ನು ಮರೆತವನಂತೆ ಅವನ ಪಾಡಿಗೆ ಸಾವಿನ ಬೀಜಗಳ ನಡುವೆ ಅವನಿರುವಾಗ ಯಾರಿಂದ ಸಾಂತ್ವನ...

...ಈ ಗಂಭೀರ ಮೌನವ್ರತದ ಕಾರಣ? ಅದು ಸಂಸಾರದ ಗುಟ್ಟು. ಬಹಿರಂಗಗೊಳ್ಳುವಂಥದಲ್ಲ... ಆದರೂ ಮನೆ ಒಂದೆ. ಮನಸ್ಸು ವಿಮುಖ.

ತನಗೆ ಅಡುಗೆ ಮನೆ — ಅವರಿಗೆ ಹಜಾರ.

ವೇದಾಂತದ ಪುಸ್ತಕ — ಕೆಲವೊಮ್ಮೆ ಮೌನವಾಗಿ, ಕೆಲವೊಮ್ಮೆ ಗಟ್ಟಿಯಾಗಿ ಪರಸ್ಪರ ಕೇಳಿಸುವಂತೆ ಓದುವ ಚಟ. ಕರೆದು ಹೇಳುವಂತಿಲ್ಲವಲ್ಲ. ಮಾತು ಬಿಟ್ಟವರಲ್ಲವೇ ತಾವಿಬ್ಬರು!

ಹೊರಗಿನಿಂದ ಬಾಬಯ್ಯ ಮತ್ತೊಮ್ಮೆ 'ಗೌರೀ' ಎಂದು ಕೂಗಿದಾಗ ಗೌರಮ್ಮನ ಯೋಚನಾಲಹರಿ ತುಂಡಾಯಿತು.

ಗೌರಮ್ಮನಿಗೆ ದಿಗ್ಭ್ರಮೆ!

ಎತ್ತರದ ಸ್ವರದಲ್ಲಿ 'ಗೌರೀ' ಎಂದು ತನ್ನನ್ನು ಯಾವ ಪ್ರೀತಿಯಿಂದ ಕೈಹಿಡಿದ ಮೊದಲ ರಾತ್ರಿಯಂದು ಕರೆದಿದ್ದರೋ ಅದೇ ಮಮತೆ ತುಂಬಿದ ಹೃದಯದಿಂದ ಕೈಹಿಡಿದವರು ಕರೆಯುತ್ತಿದ್ದಾರಲ್ಲ! ಮೈ ಚಿವುಟಿ ನೋಡಿಕೊಂಡರು. ಹೌದು. ಕರೆದದ್ದು ಸತ್ಯ. ದೀರ್ಘಕಾಲ ಅಪರಿಚಿತವಾಗಿದ್ದ ಒಲುಮೆಯ ಸ್ವರ ಯಾವುದೋ ಲೋಕದಿಂದ ಕಿವಿಗಪ್ಪಳಿಸಿದಂತಾಯ್ತು.

ಗೌರಮ್ಮ ಹಸೆಮಣೆಯ ಮದುಮಗಳಂತಾದರು.

ಸಡಗರದಿಂದ ಅಡುಗೆಯ ಕೆಲಸದಿಂದ ಒದ್ದೆಯಾದ ಅಂಗೈಗಳನ್ನು ಸೆರಗಿನಿಂದ ಒರೆಸಿಕೊಳ್ಳುತ್ತ ಚಿಟ್ಟೆಯಂತೆ ಹಾರಿ ಬಂದರು ಹೊರಗೆ... ನೋಡುವುದೇನು? ಈ ದಿಗ್ಬಂಧನದ ತಿಂಗಳುಗಳಲ್ಲೆಲ್ಲ ಅರೆಪಂಚೆಯಲ್ಲಿದ್ದ ಗಂಡ ಮದುಮಗನಂತೆ ಶುಭ್ರ ವಸ್ತ್ರಧಾರಿಯಾಗಿ ಬೆಳಗುತ್ತಿದ್ದಾರೆ. ಎಂದೋ ಬದಿಗಿರಿಸಿದ ಉತ್ಕೃಷ್ಟ ಪರಿಮಳದ್ರವ್ಯದಿಂದ ಲೇಪಿತರಾಗಿ ಮುಗುಳ್ನಗುತ್ತ ಕುಳಿತಿರುವ ಪತಿದೇವರನ್ನು ಕಾಣುತ್ತ ಗೌರಮ್ಮನಿಗೂ ನಗು ತಡೆಯಲಾಗಲಿಲ್ಲ.

ಎದುರಿನ ಟೀಪಾಯಿ ಮೇಲೆ ಹೊಸದಾಗಿ ತಂದ ಸೀರೆ, ಅದರ ಮೇಲೆ ಲಕ್ಷ್ಮೀಪದಕದ ಹೊಳೆಯುವ ಒಂದೆಳೆ ಚಿನ್ನದ ಸರ, ಬದಿಯ ಚೀಲದಿಂದ ಅರ್ಧಜಾರಿದ ಎಳೆ ಸೌತೆಕಾಯಿಗಳು, ಸೊಪ್ಪಿನ ಕಟ್ಟು ಎಲ್ಲ.

ಆಘಾತಗೊಂಡವರಂತೆ ಗೌರಮ್ಮ ಕ್ಷಣಕಾಲ ಮೌನಿಯಾದರು. ಇದು ಕನಸಲ್ಲ ನನಸು ಎಂದು ಅರಿವಾಗಿ ಹುಬ್ಬು ಗಂಟಿಕ್ಕಿ ಮೊಗದ ತುಂಬ ಅಚ್ಚರಿಯನ್ನೂ ಪ್ರಶ್ನೆಯನ್ನೂ ಏಕಕಾಲದಲ್ಲಿ ವ್ಯಕ್ತಪಡಿಸಿದರು.

ಬಾಬಯ್ಯ ಮಾತ್ರ ಏನೂ ಆಗದವರಂತೆ ಮತ್ತಷ್ಟು ಸಂಭ್ರಮದಿಂದ ಮಧುರವಾಗಿ ಗೌರೀ ಎಂದು ಕೈಹಿಡಿದವಳನ್ನು ಕರೆದರು. ಕಾಲದ ಪರದೆಯನ್ನು ಸರಿಸಿ ಬಂದ ಈ ಕೂಗು ಗೌರಮ್ಮನ ಅಂತಃಕರಣವನ್ನು ತಟ್ಟಿತು. ಆದರೂ ಉದ್ಗರಿಸಲಾಗದ ಸ್ಥಿತಿ. ಒಂದೇ ಮನೆಯಲ್ಲಿದ್ದು ಪರಸ್ಪರ ಭಾವಸ್ಪಂದನ ಮತ್ತು ಮಾತಿನ ಲಹರಿಗಳಿಲ್ಲದೆ ಮೌನದಿಂದ ಬದುಕಿದ ಈ ಮೂವತ್ತಕ್ಕೂ ಮಿಕ್ಕಿ ವರುಷಗಳ ಜಡತ್ವ ಅವರ ಬಾಯಿಯನ್ನು ಬಿಗಿಯಾಗಿ ಕಟ್ಟಿಬಿಟ್ಟಿತು. ಆದರೆ ಬಾಬಯ್ಯ ಉತ್ಸಾಹದ ಚಿಲುಮೆಯಂತಾಗಿದ್ದರು. ಅವರೇ ಮಾತಿನ ಲಹರಿಯನ್ನು ಮುಂದುವರಿಸಿದರು...



'ಕ್ಷಮಿಸು ಗೌರಾ. ನನ್ನ ಒರಟು ಹಟದಿಂದ ನಿನ್ನನ್ನು ದಂಡಿಸಿದ್ದೆ. ಹತ್ತಿರವಿದ್ದೂ ದೂರವಾದೆ. ಇಂದೀಗ ಎಲ್ಲ ಮರೆತಿದ್ದೇನೆ.'

ಏಕೀ ಪರಿವರ್ತನೆ ಎಂದು ಗೌರಮ್ಮ ಕೇಳಲಿಲ್ಲ. ಬಾಬಯ್ಯನೇ ಹೇಳತೊಡಗಿದರು:

'ನೋಡು ಗೌರಾ, ಬದುಕಿನ ನಿಜವಾದ ಅರ್ಥವನ್ನು ಈಗ ಮನಸ್ಸಿಗೆ ತಂದುಕೊಳ್ಳದೆ ಇನ್ನೆಂದು ತಂದುಕೊಂಡೇನು? ಈಗ ನಾವಿಬ್ಬರು ಪ್ರಾಯ ಸಂದ ಮುದುಕರು. ಮನೆಯೊಳಗೇ ಇರಬೇಕೆಂದು ಕಟ್ಟಪ್ಪಣೆ. ಸರಕಾರದ ನಿಯಮವೆಂದೇನಲ್ಲ. ನನ್ನ ಒಳಗಿನ ಕಣ್ಣು ಕಾಣುತ್ತಿದೆ ಒಂದು ಅವ್ಯಕ್ತ ಶಕ್ತಿಯನ್ನು. ಈ ಏಕಾಕಿತನದ ಅವಲಂಬನೆಯನ್ನು.'

ಬಾಬಯ್ಯ ಕ್ಷಣಕಾಲ ಮಾತನ್ನು ನಿಲ್ಲಿಸಿದರು. ಗೌರಮ್ಮ ಕುತೂಹಲದಿಂದ ಏನನ್ನೂ ಕೇಳಲಿಲ್ಲ. ಗಂಡನ ಹತ್ತಿರ ನಿಧಾನವಾಗಿ ಬರುತ್ತಿದ್ದಂತೆ, ಹೆಂಡತಿಯ ಕೈಯನ್ನು ಮೃದುವಾಗಿ ಹಿಡಿದು ಬಳಿಯಲ್ಲಿ ಕುಳ್ಳಿರಿಸಿಕೊಂಡು ಮತ್ತೆ ನಗುತ್ತ ಬಾಬಯ್ಯ ಹೇಳತೊಡಗಿದರು:

'ನೆನಪಿದೆಯಾ ಗೌರಾ, ಅಂದು ಹಸೆಮಣೆಯಲ್ಲಿ ನಿನ್ನ ಮೃದು ಮೈಗೆ ತಾಗಿ ಕುಳಿತುಕೊಳ್ಳಬೇಕೆಂದು ನಾನು ಎಷ್ಟು ಆಸೆ ಪಟ್ಟಿದ್ದರೂ ನೀನು ನಾಚುಗೆಯಿಂದ ದೂರ ದೂರ ಸರಿಯುತ್ತಿದ್ದಿ. ಹತ್ತಿರವಿದ್ದೂ ದೂರವಿರುವ ನಾನು ಇಂದೇಕೆ ನಿನ್ನೊಡನೆ ಬಾಯ್ತುಂಬ ಮಾತನಾಡುತ್ತ ಮೈಗಂಟಿ ಕುಳಿತುಕೊಳ್ಳಲು ಆಶಿಸುತ್ತಿರುವೆ... ಏಕೆ ಗೊತ್ತಾ? ನಿರ್ದಯವಾಗಿ ಲಕ್ಷ ಲಕ್ಷ ಜನರನ್ನು ಸಾಯಿಸುತ್ತಿರುವ ಈ ಅದೃಶ್ಯ ಅಣುಜೀವಿಗಳೊಂದಿಗೆ ನಾವು ಸಹಜವಾಗಿ ಬಾಳುವ ಕಲೆಯನ್ನು ಕರಗತ ಮಾಡಿಕೊಳ್ಳಲೇಬೇಕಲ್ಲ.'

ಈಗ ಗೌರಮ್ಮ ಮೊದಲ ಬಾರಿಗೆ ಎಂಬಂತೆ ಮೌನ ಮುರಿದು ಕೇಳಿದರು:

'ಕೈ ಹಿಡಿದ ನನ್ನೊಡನೆ ಮಾತು ಬಿಟ್ಟರೂ ದಿನವಿಡೀ ಏನನ್ನೋ ಓದುತ್ತ ಟಿ.ವಿ. ನೋಡುತ್ತ ತುಂಡು ಪಂಚೆಯಲ್ಲಿ ಕಾಲ ಕಳೆಯುತ್ತಿದ್ದೀರಲ್ಲ. ಇಂದಲ್ಲ ನಾಳೆ ಇದಕ್ಕೆ ಪರಿಹಾರ ಸಿಗದೇ?'

ಬಾಬಯ್ಯ ಹೆಂಡತಿಯ ಕೈಯನ್ನು ಎದೆಗೊತ್ತಿಕೊಂಡು ಹೇಳಿದರು:

'ಅದೇ ಗಮ್ಮತ್ತು ನೋಡು ಗೌರಾ. ಮದ್ದಿಲ್ಲವಂತೆ ಈ ರೋಗಾಣುವಿಗೆ. ಗುಲಾಬಿ ಹೂವು ಮುಳ್ಳಿನೊಂದಿಗಿರುವಂತೆ ನಾವು ಅದರೊಂದಿಗೇ ಬಾಳಬೇಕಂತೆ. ಜಗತ್ತಿನ ಪರಿಣತರೆಲ್ಲರ ಅಭಿಪ್ರಾಯವಿದು. ಹಾಗಾಗಿ ಈ ವೇದಾಂತ ಗೌರಾ... ಅವನೇ — 'ಸರ್ವದರ್ಶಿ'ಯಂತೆ. ಎಲ್ಲವನ್ನೂ ಕಾಣುತ್ತಿದ್ದಾನೆ. ಮತ್ತೆ ನಮಗೆಲ್ಲ ಕಾಣಿಸುತ್ತಿದ್ದಾನಂತೆ. ನೆನಪು ಮಾಡಿಕೊ ನೀನು ಓದುತ್ತಿರುವ ಸ್ತೋತ್ರದ ಸಾಲನ್ನು — 'ಅನಿವರ್ತೀ ನಿವೃತ್ತಾತ್ಮಾ' ಅಂದರೆ ಎಲ್ಲ ಜೀವಿಗಳಲ್ಲಿಯೂ ಇರುವವನಂತೆ ಅವನು. ಮತ್ತೆ ನಮ್ಮನ್ನು ಬಂಧಮುಕ್ತನನ್ನಾಗಿಸುವವನೂ ಅವನೇ ಅಂತೆ. ಗಮ್ಮತ್ತು ಏನು ಗೊತ್ತಾ ಗೌರಾ! ಅವನಿಗೆ ಯಾವ ಬಂಧನವೂ ಇಲ್ಲವಂತೆ! ಸ್ತೋತ್ರ ಏನೇ ಹೇಳಲಿ. ನನ್ನ ವೇದಾಂತ ಏನು ಗೊತ್ತಾ? ಈ ಕ್ಷಣ ನಮ್ಮದಲ್ಲವೇ ಗೌರಾ!'

ಗಂಡನ ಮಾತನ್ನು ಅರ್ಧಕ್ಕೆ ನಿಲ್ಲಿಸುತ್ತ ಗೌರಮ್ಮ ಉದ್ಗರಿಸಿದರು:

'ಓ ಕೋವಿದ ವೇದಾಂತ ಪಂಡಿತರೇ, ಮೇಲಕ್ಕೇಳಿ. ನೀವು ಮರೆತಿದ್ದರೂ ನಾನು ಮರೆತಿಲ್ಲ. ಇಂದು ನಮ್ಮ ಮದುವೆಯ ದಿವಸ. ಕೇಸರಿ ಹಾಕಿ ಬಾದಾಮಿ ಹಲ್ವಾ ಮಾಡಿದ್ದೇನೆ. ಹ್ಞಾಂ, ಇನ್ನು ನಿಮ್ಮ ಕಮಟು ವಾಸನೆಯ ತುಂಡು ಪಂಚೆಯನ್ನುಟ್ಟು ಬರಬೇಡಿ. ಇದೇ ವೇಷಭೂಷಣದಲ್ಲಿ ಮದುಮಗನಂತೆ ಬನ್ನಿ... ಹೊರಗೆಲ್ಲ ಸುತ್ತಿ ಬಂದಿದ್ದೀರಲ್ಲ, ಸೋಪಿನಿಂದ ಕೈ ಕಾಲು ತೊಳೆದುಕೊಂಡೂ ಬನ್ನಿ. ನೀವು ಪ್ರೀತಿಯಿಂದ ತಂದ ಹೊಸ ಸೀರೆ ಮತ್ತು ಹಾರ ಧರಿಸಿ ನಾನು ಅವತರಿಸುವೆ...'

ಇಬ್ಬರ ನಗು ಏಕಕಾಲದಲ್ಲಿ ಲಹರಿಯಾಯಿತು.

ಜಗತ್ತನ್ನೆಲ್ಲ ಸಾವಿನ ಬೀಜ ಆವರಿಸಿರುವ ಈ ಕ್ಷಣದಲ್ಲಿ ಬಾಬಯ್ಯ ಮತ್ತು ಗೌರಮ್ಮ ಭರವಸೆಯ ಹೂವನ್ನರಳಿಸತೊಡಗಿದರು — ಹೂಮುತ್ತಿನ ಸುರಿಮಳೆಯ ನಡುವೆ.

ಪ್ರತಿಕ್ರಿಯಿಸಿ: feedback@sudha.co.in